ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

# ಜೈನ್ ವಿವಿಯಲ್ಲಿ ಅಭಿನಯ ನಾಟಕೋತ್ಸವ ಶಿಬಿರ

**ಬೆಂಗಳೂರು, ಜ.21**- ಯುವಜನರ ರಂಗಾಸಕ್ತಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಜೈನ್ ವಿಶ್ವವಿದ್ಯಾಲಯದಲ್ಲಿ 10 ದಿನಗಳ ಕಾಲ ರಂಗಶಿಬಿರ ಹಮ್ಮಿಕೊಳ್ಳಲಾಗಿದ್ದು, ಜ.31ರೊಳಗೆ ಆಸಕ್ತರು ಅರ್ಜಿ ಸಲ್ಲಿಸಬಹುದಾಗಿದೆ.

ಜೀವನ ಕಲೆಯನ್ನು ತಿಳಿಸುವ ಉತ್ತಮ ಶಿಕ್ಷಕ ರಂಗಭೂಮಿ ಎಂಬ ತತ್ವನುಡಿಯೊಂದಿಗೆ ರಂಗಭೂಮಿ ಭಾವಾಭಿವ್ಯಕ್ತಿ ಮತ್ತು ಸಾಮಾಜಿಕ ಬದಲಾವಣೆಯನ್ನು ಪ್ರತಿಬಿಂಬಿಸುವ ಶಕ್ತಿಯುತ ವೇದಿಕೆ ಎಂಬ ನಂಬಿಕೆಯೊಂದಿಗೆ ಅಭಿನಯ ರಾಷ್ಟ್ರಮಟ್ಟದ ಕಿರುನಾಟಕ ಸ್ಪರ್ಧೆಯಿಂದ ಜೈನ್ ವಿಶ್ವವಿದ್ಯಾಲಯ-ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಳೆದ ಏಳು ವರ್ಷಗಳಿಂದ ನಡೆಸುತ್ತ ಬಂದಿದೆ.

ಈಗ 10 ದಿನಗಳ ಕಾಲ ರಂಗಶಿಬಿರ ಹಮ್ಮಿಕೊಂಡಿದೆ ಎಂದು ನಿರ್ದೇಶಕರಾದ ಅಪರ್ಣಾ ಪ್ರಸಾದ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಬಿರದ ನಂತರ ಮಾರ್ಚ್ 1 ಮತ್ತು 2ರಂದು 20 ನಿಮಿಷಗಳ ರಂಗಪ್ರದರ್ಶನ ಏರ್ಪಡಿಸಲಾಗಿದೆ. ಜೈನ್ ವಿಶ್ವವಿದ್ಯಾಲಯದ ಪದವಿ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಮಾತ್ರ ಈ ಶಿಬಿರ ಆಯೋಜಿಸಲಾಗಿದೆ.

ಆಸಕ್ತರು ಜೈನ್ ವಿವಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ನಂ.1/1-1, ಏಟ್ರಿಯಾ ಟವರ್, ಅರಮನೆ ರಸ್ತೆ, ಬೆಂಗಳೂರು-01 ಅಥವಾ www.cms.ac.in ವೆಬ್‌ಸೈಟ್ ಮಾಹಿತಿ ಪಡೆಯಬಹುದಾಗಿದೆ.